# ನವಿಲುಗನ್ನಡಿ

- ಡಿಸೆಂಬರ್ ಸಂಚಿಕೆಯ ಎರಡೂ ಸಂದರ್ಶನಗಳು ಔಚಿತ್ಯಪೂರ್ಣವಾಗಿವೆ. ಪ್ರಬಂಧಗಳೂ ಸ್ವಾರಸ್ಯಕರವಾಗಿವೆ. ಕಥೆ–ಕವಿತೆಗಳು ಸೊಗಸಾಗಿವೆ.

  **ಅನುಪಮಾ ವಸ್ತ್ರದ್, ಧಾರವಾಡ**

- 'ಕನ್ನಡದ ಬಹುರೂಪಿ ಚಹರೆಗಳು' ರಹಮತ್ ತರೀಕೆರೆ ಅವರ ಲೇಖನ ಇಡೀ ಸಂಚಿಕೆಗೆ ಕಿರೀಟಪ್ರಾಯವಾಗಿದೆ.

  **ಉಮಾ ಜಿ.ಪಿ., ಉಡುಪಿ**

- ನಾಗರಾಜು ಜಿ.ಬಿ. ಅವರ ಕಥೆ 'ಗಾಂಧೀವಾದಿಯ ಹಳೆಯ ಟ್ರಂಕ್' ಪ್ರಸಕ್ತ ರಾಜಕಾರಣವನ್ನು ವಿಡಂಬಿಸುವಂತಿದೆ. ಮರಿಪುಡಾರಿಗಳ ಪುಂಡಾಟಿಕೆ ಬಡವರನ್ನು ಹೇಗೆಲ್ಲಾ ದಮನಿಸಲೆತ್ನಿಸುತ್ತದೆ ಎನ್ನುವುದನ್ನು 'ಹುಯ್ಯೋ ಹುಯ್ಯೋ ಮಳೆರಾಯ' (ಚೀಮನಹಳ್ಳಿ ರಮೇಶಬಾಬು) ಕಥೆ ಮುಂದಿಡುತ್ತದೆ.

  **ಸಿ.ಕೆ.ಗಣಪ್ಪನವರ ಡಂಬಳ**


- 'ಮಸ್ತಕಕ್ಕಳಿವುಂಟು ಪುಸ್ತಕಕ್ಕಳಿವುಂಟೆ?' ಎಂ.ಎಸ್. ಶ್ರೀರಾಮ್ ಲೇಖನ ಸ್ವಾರಸ್ಯವಾಗಿದೆ. ನಮ್ಮ ಸಾಹಿತ್ಯಕ್ಕೆ ಏನೇ ಹೊಸ ತಂತ್ರಜ್ಞಾನದ ರೂಪ ನೀಡಿದರೂ ಅದು ಮುದ್ರಿತ ಕೃತಿಗಳು ನೀಡುವ ಖುಷಿ ನೀಡಲಾರವು.

  **ಹುರುಕಡ್ಲಿ ಶಿವಕುಮಾರ, ಬಾಚಿಗೊಂಡನಹಳ್ಳಿ**

- 'ಸಾವೆಂಬುದು ಸಾಯದ ನೆನಪು' ಅಮರೇಶ ಗಿಣಿವಾರ ಅವರ ಪ್ರಬಂಧದಲ್ಲಿ ಸಾವಿನ ವಿವಿಧ ಆಯಾಮಗಳನ್ನು ಸೊಗಸಾಗಿ ಚಿತ್ರಿಸಲಾಗಿದೆ.

  **ಶಾಂತ ಕುಮಾರ್, ಸರ್ಜಾಪುರ**

- ಕಾವ್ಯಪ್ರೇಮಿ ಲಕ್ಷ್ಮೀಶ ತೋಳ್ಪಾಡಿ ಅವರೊಂದಿಗಿನ 'ಮಾತುಕತೆ'ಯಲ್ಲಿ ಗಂಭೀರ ವಿಷಯಗಳನ್ನೂ ಸರಳವಾಗಿ ವಿವರಿಸಿದ ಪರಿ ಹಿಡಿಸಿತು. ಇನ್ನು, ತೀರ್ಥಗಳೆಲ್ಲವೂ ನೀರು ಎಂಬುದನ್ನು ಒಪ್ಪಿಕೊಂಡರೂ, ನೀರೆಲ್ಲವೂ ತೀರ್ಥವಾಗಲು




  ಸಾಧ್ಯವೆ ಎಂಬ ಅನುಮಾನ ದಟ್ಟವಾಗಿ ಕಾಡಿತು.

  **ಶಂಕರನಾರಾಯಣ ಭಟ್, ಹೊನ್ನಾವರ**

- ಕರ್ಕಿ ಕೃಷ್ಣಮೂರ್ತಿಯವರ ಇಮೋಜಿ ಭಾಷೆ ಅಂಕಣ ಕೊನೆಗೊಂಡಿದ್ದು ತುಸು ಬೇಸರ ಮೂಡಿಸಿದೆ. 'ಮಯೂರ'ದಲ್ಲಿ ಇಂತಹ ಬರಹಗಳು ಇನ್ನಷ್ಟು ಮೂಡಿ ಬರಲಿ.

  **ಮಲ್ಲಿಕಾರ್ಜುನ ಸುರಧೇನುಪುರ**

- ಕರೀಗೌಡ ಅವರ 'ಸಯಾಮಿ ದಾಂಪತ್ಯ' ಅನುಭವ ಕಥನ ಸೊಗಸಾಗಿದೆ. ಅಂಗಾಂಗ ದಾನ, ದೇಹ ದಾನದ ಬಗ್ಗೆ ಸಮರ್ಪಕ ಮಾಹಿತಿ ಹಂಚಿದ್ದಾರೆ.

  **ನಾರಾಯಣಸ್ವಾಮಿ, ವಿಜಯಪುರ**

- ಮೀನಾ ಮೈಸೂರು ಅವರ 'ಸೇವಂತಿ, ಅವ್ವೋ ಇವ್ವೋ...' ಕಥೆಯಲ್ಲಿ ಸೇವಂತಿಯ ಮುಗ್ಧತೆ ಹಾಗೂ ಕ್ರೀಡಾ ಮನೊಭಾವವನ್ನು ಕಂಡು ಅಳಬೇಕೋ ನಗಬೇಕೋ ತಿಳಿಯದಾಯಿತು.

  **ಕೆ. ಹೊನ್ನಪ್ಪ, ಕ್ಯಾತ್ಸಂದ್ರ**

- ಗೀತಾ ವಸಂತ ಅವರ 'ಭವದ ಸ್ಪ್ರಿಂಗಿನ ಮೇಲೆ' ಹಾಗೂ ಚಿದಾನಂದ ಸಾಲಿ ಅವರ 'ಕನ್ನಡಿ' ಕವಿತೆಗಳು ಸೊಗಸಾಗಿವೆ.

  **ವಸಂತಕುಮಾರ್ ಹೆಗಡೆ, ಬೆಂಗಳೂರು**